



# ಅನುಪಮ್-ಷಾ ಜಗಳ

ನಾಸಿರುದ್ದೀನ್ ಷಾ ಮತ್ತು ಅನುಪಮ್ ಖೇರ್ ನಡುವಣ ವಾಗ್ಯುದ್ಧ ಬಾಲಿವುಡ್‌ನಲ್ಲಿ ಹಲವರಿಗೆ ತುಂಬ ಇರಿಸುಮುರಿಸು ಉಂಟು ಮಾಡಿದೆ. ಇಬ್ಬರೂ ಹಿರಿಯ ನಟರು; ಇಬ್ಬರೂ ಪ್ರತಿಭಾವಂತರು. ಎಳೆಯರಿಗೆ ಮಾರ್ಗದರ್ಶನ ಮಾಡಬೇಕಾದ ಇವರೇ ಹೀಗೆ ಬಹಿರಂಗ ಕಿತ್ತಾಟ ನಡೆಸಿದರೆ ಹೇಗೆ ಎನ್ನುವುದು ಹಲವು ನಟನಟಿಯರ ಪ್ರಶ್ನೆ. ನಿರ್ಮಾಪಕ ರಾಹುಲ್ ಧೊಲಾಕಿಯ ಕೂಡಾ ಇದೇ ಪ್ರಶ್ನೆ ಕೇಳಿದ್ದಾರೆ. ‘ಇದೊಂದು ದುರದೃಷ್ಟಕರ ಘಟನೆ’ ಎನ್ನುವುದು ರಾಹುಲ್ ಬೇಜಾರು. ಇಬ್ಬರೂ ರಾಹುಲ್ ಚಿತ್ರಗಳಲ್ಲಿ ಕೆಲಸ ಮಾಡಿದವರೇ. ನಾಸಿರುದ್ದೀನ್ ಷಾ ‘ಪರ್ಜಾನಿಯಾ’ ಚಿತ್ರದಲ್ಲಿ ನಟಿಸಿದ್ದರೆ, ಅನುಪಮ್ ಖೇರ್ ಸಂಜಯ್ ದತ್ ಅಭಿನಯದ ‘ಲಮ್ಹಾ’ದಲ್ಲಿ ನಟಿಸಿದ್ದಾರೆ.

ಸಂದರ್ಶನವೊಂದರಲ್ಲಿ ನಾಸಿರುದ್ದೀನ್, ಅನುಪಮ್ ಖೇರ್‌ರನ್ನು ‘ಜೋಕರ್ ಮತ್ತು ಸೈಕೊ’ ಎಂದು ಕರೆದಿರುವುದು ಜಗಳಕ್ಕೆ ಮೂಲ. ಅದಕ್ಕೆ ಕಟುವಾದ ಉತ್ತರ ಕೊಟ್ಟಿರುವ ಅನುಪಮ್, ‘ನಾಸಿರ್ ಅತ್ಯಂತ ಪ್ರತಿಭಾವಂತ ನಟ. ಆದರೆ ಆತನ ಪೂರ್ಣ ಜೀವನ ಹತಾಶೆಯದ್ದು. ಡ್ರಗ್ಸ್ ಕೂಡಾ ತೆಗೆದುಕೊಳ್ಳುತ್ತಾನೆ’ ಎಂದಿರುವುದು ಜಗಳ ಬೆಳೆಯಲು ಕಾರಣವಾಗಿದೆ. ಇಬ್ಬರ ನಡುವಣ ಜಗಳವನ್ನು ತಣ್ಣಗೆ ಮಾಡಲು ಪ್ರಯತ್ನಿಸುವವರು ಯಾರು ಎನ್ನುವುದೀಗ ಪ್ರಶ್ನೆ. ರಾಹುಲ್ ಸ್ವಲ್ಪ ತಣ್ಣಗೆ ಆ ಕೆಲಸಕ್ಕೆ ಕೈಹಚ್ಚಿದ್ದಾರೆ. ‘ಇಬ್ಬರೂ ಭಾರತದ ಅತ್ಯಂತ ಪ್ರತಿಭಾವಂತ ನಟರು. ಸಿಟ್ಟಲ್ಲಿ ಏನೋ ಮಾತಾಡಿಕೊಂಡಿದ್ದಾರೆ’ ಎಂದು ರಾಹುಲ್ ಹೇಳಿದ್ದಾರೆ. ಅನುಪಮ್ ಖೇರ್ ಸದ್ಯಕ್ಕೆ ಅಧಿಕಾರಸ್ಥರ ಪರವಾಗಿ ಇರುವುದರಿಂದ ಈ ಜಗಳ ಇಲ್ಲಿಗೇ ನಿಲ್ಲುವುದಿಲ್ಲ ಎನ್ನುವುದಂತೂ ಖಚಿತ. ■



# ಕಂಗನಾ ಪೈಲಟ್

ಕಂಗನಾ ನಟಿಸಿರುವ ಚಿತ್ರ ‘ಪಂಗಾ’ ಬಾಲಿವುಡ್‌ನಲ್ಲಿ ಸುದ್ದಿ ಮಾಡುತ್ತಿದೆ. ಸಿನಿಮಾದ ಕಥೆ ಏನೇ ಇರಲಿ, ಮುಯ್ಯಿ ತೀರಿಸಿಕೊಳ್ಳುವುದರಲ್ಲಿ ಕಂಗನಾ ಎಕ್ಸ್‌ಪರ್ಟ್ ಎನ್ನುವುದು ಬಾಲಿವುಡ್ ಅಭಿಪ್ರಾಯ.

ಕರಣ್ ಜೋಹರ್ ಜೊತೆಗೆ ಕಂಗನಾ ಖಡಾಖಡಿ ಜಗಳ ನಡೆಸಿದ್ದು ಹಳೇ ಸುದ್ದಿ. ಹಾಗೆಯೇ ಹೃತಿಕ್ ರೋಷನ್ ಜೊತೆಗಿನ ಜಗಳ ಈಗಲೂ ಮುಂದುವರಿದಿದೆ. ಈ ಮಧ್ಯೆ ‘ಛಪಾಕ್’ ಚಿತ್ರದ ಮೇಕಿಂಗ್ ಬಗ್ಗೆ ದೀಪಿಕಾ ಬಿಡುಗಡೆ ಮಾಡಿರುವ ವಿಡಿಯೊ ಕಂಗನಾಳ ಕಣ್ಣು ಕೆಂಪಗಾಗಿಸಿದೆ. ‘ಆ್ಯಸಿಡ್ ಸಂತ್ರಸ್ತ ಮಹಿಳೆಯನ್ನು ಅವಮಾನ ಮಾಡುವಂತಿದೆ ಇದು’ ಎನ್ನುವುದು ಕಂಗನಾ ಆಕ್ಷೇಪ.

ಕಂಗನಾ ಹಾರಾಟ ಅತಿಯಾಯಿತು ಎಂದು ಯಾರೂ ಅಂದುಕೊಳ್ಳುವಂತಿಲ್ಲ. ಏಕೆಂದರೆ ಆಕೆ ಶೀಘ್ರವೇ ಯುದ್ಧಕಥೆಯ ಚಿತ್ರವೊಂದರಲ್ಲಿ ಏರ್‌ಫೋರ್ಸ್ ಪೈಲಟ್ ಪಾತ್ರ ನಿರ್ವಹಿಸಲಿದ್ದಾಳೆ. ಚಿತ್ರದ ಹೆಸರು ‘ತೇಜಸ್’. ಜುಲೈನಲ್ಲಿ ಶೂಟಿಂಗ್ ಶುರು. ರೋನೀ ಸ್ಕ್ರೂವಾಲಾ ನಿರ್ಮಾಣದ ಈ ಚಿತ್ರಕ್ಕೆ ಕಂಗನಾ ಸಹಿ ಹಾಕಿ ಆಗಿದೆ. ‘ಸೈನಿಕ ಪಾತ್ರ ಮಾಡಬೇಕು ಎನ್ನುವುದು ನನ್ನ ಬಹುಕಾಲದ ಬಯಕೆ. ಚಿಕ್ಕಂದಿನಿಂದಲೇ ಸಶಸ್ತ್ರ ಪಡೆಯ ಬಗ್ಗೆ ನನಗೆ ಮೋಹವಿದೆ. ನಮ್ಮ ದೇಶವನ್ನು ಕಾಯುವ ಸಲುವಾಗಿ ಸೈನಿಕರು ಎಷ್ಟೊಂದು ತ್ಯಾಗ ಮಾಡುತ್ತಾರೆ. ಈ ಚಿತ್ರ ಅವರ ಸ್ಮರಣೆಗೆ’ ಎಂದು ಕಂಗನಾ ಭಾವುಕವಾಗಿ ಹೇಳಿದ್ದಾಳೆ.

ಅಂದ ಹಾಗೆ ಕಂಗನಾಗೆ ಈ ಪಾತ್ರಕ್ಕೆ ಸ್ಫೂರ್ತಿ ಅಭಿನಂದನ್ ವರ್ಧಮಾನ್ ಅಂತೆ. ‘ಯುದ್ಧಭೂಮಿಯಲ್ಲಿ ಅವರು ತೋರಿದ ಶೌರ್ಯವನ್ನು ಆರಂಭದಿಂದಲೂ ನೋಡಿದ್ದೇನೆ. ಹಿ ಈಸ್ ಗ್ರೇಟ್’ ಎಂದು ಕಂಗನಾ ಮೆಚ್ಚುಗೆ ವ್ಯಕ್ತಪಡಿಸಿದ್ದಾಳೆ. ಪೈಲಟ್ ಪಾತ್ರಕ್ಕೆ ವೃತ್ತಿಪರ ಪೈಲಟ್‌ಗಳಿಂದ ತೀವ್ರ ತರಬೇತಿಯನ್ನೂ ಪಡೆಯಲು ನಿರ್ದೇಶಕರು ಸೂಚಿಸಿದ್ದಾರಂತೆ. ಅಂದ ಹಾಗೆ ಈ ಚಿತ್ರಕ್ಕೆ ಮುನ್ನ ಕಂಗನಾ, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಜೀವನ ಆಧಾರಿತ ‘ತಲೈವಿ’ ಶೂಟಿಂಗ್ ಮುಗಿಸಬೇಕಾಗಿದೆ.

■ ಬಿಂದು